# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್–ಸಂಖ್ಯೆ 129ರಲ್ಲಿ ದಿನಾಂಕ: 21.05.2022ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು**

ದಿನಾಂಕ:21.05.2022ರಂದು ವಾರ್ಡ್ ಸಂಖ್ಯೆ 129ರ ಮೇ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಂಖ್ಯೆ129ರ ನವೀಕರಣಗೊಳ್ಳುತ್ತಿರುವ ವಾರ್ಡ್ ಕಛೇರಿಯಲ್ಲಿನ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳೊಂದಿಗೆ ನಡೆಸಲಾಯಿತು ಹಾಗೂ ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಶ್ರೀ. ಜಿ. ವಿಶ್ವನಾಥ್, ಅಧೀಕ್ಷಕ ಅಭಿಯಂತರರು(ರಾರಾನಗರ ವಲಯ) ಹಾಗೂ ವಾರ್ಡ್129 ನೋಡಲ್ ಅಧಿಕಾರಿಗಳು
2. ಶ್ರೀ. ವೆಂಕಟೇಶ.ಸಿ ಕಿರಿಯ ಅಭಿಯಂತರರು
3. ಶ್ರೀ. ರವಿಕುಮಾರ್ ಮತ್ತು ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್129
4. ವಾರ್ಡ್ ಮಾರ್ಷಲ್ ವಾರ್ಡ್129
5. ಶ್ರೀ. ಸಚಿನ್ ಸಹಾಯಕ ಅಭಿಯಂತರರು(ವಿದ್ಯುತ್)

ಸಭೆಯಲ್ಲಿ ಹಾಜರಿದ್ದ ಸ್ಥಳೀಯ ನಿವಾಸಿಗಳು:

1. ಶ್ರೀ. ರಾಮಣ್ಣ ತಿಮ್ಮಯ್ಯ ಎನ್.ಜಿ.ಇ.ಎಫ್ ಬಡಾವಣೆಯ ನಿವಾಸಿಗಳು
2. ಶ್ರೀ. ರಾಮಚಂದ್ರ ಮತ್ತು ಎಸ್.ಕೆ.ಭಟ್ 14ನೇ ಬ್ಲಾಕ್, ಎನ್.ಜಿ.ಇ.ಎಫ್ ಬಡಾವಣೆ, ನಾಗರಭಾವಿ ನಿವಾಸಿಗಳು
3. ಶ್ರೀ. ವಿ.ಹನುಮಂತಯ್ಯ ಸರ್ಕಾರಿ ಮುದ್ರಣಾಲಯ ಬಡಾವಣೆಯ ನಿವಾಸಿಗಳು
4. ಶ್ರೀ. ಶೋಭಾ ಭಟ್ ಆರೋಗ್ಯ ಬಡಾವಣೆಯ ನಿವಾಸಿ

ಹಾಗೂ ಹಾಜರಿದ್ದ ವಾರ್ಡ್ ನ ನಿವಾಸಿಗಳು, 13 ಪುರುಷರು, 4 ಮಹಿಳೆಯರು.

ಸದರಿ ವಾರ್ಡ್ ಸಮಿತಿ ಸಭೆಯನ್ನು ಹಾಜರಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- ಆರೋಗ್ಯ ಬಡಾವಣೆ, 3ನೇ ಮುಖ್ಯರಸ್ತೆಯಲ್ಲಿರುವ ಚರಂಡಿಯಲ್ಲಿನ ಹೂಳು ತೆಗೆಯಲು ಮತ್ತು ಚರಂಡಿಗಳ ಮೇಲೆ ಅಳವಡಿಸಿರುವ ಚಪ್ಪಡಿ ಕಲ್ಲುಗಳು ಮುರಿದು ಬಿದ್ದಿರುತ್ತವೆ, ಅವುಗಳನ್ನು ಸರಿಪಡಿಸಲು ಕೋರಿರುತ್ತಾರೆ.
- ನಾಗರಭಾವಿ ಎನ್.ಜಿ.ಎಫ್. ಬಡಾವಣೆಯ 14ನೇ ಬ್ಲಾಕ್‌ನಲ್ಲಿರುವ ಚರಂಡಿಯ ಮೇಲಿನ ಚಪ್ಪಡಿ ಕಲ್ಲುಗಳನ್ನು ಅಳವಡಿಸಲು ಕೋರಿರುತ್ತಾರೆ.
- ಸರ್ಕಾರಿ ಮುದ್ರಣಾಲಯ ಬಡಾವಣೆಯಲ್ಲಿನ ಮಂಗಳೂರು ಪಿ.ಯು. ಕಾಲೇಜು ಮತ್ತು ಆರ್.ಡಿ.ಪಟೇಲ್ ಟಿಂಬರ್ ಹತ್ತಿರವಿರುವ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ.
- ಮಲ್ಲತ್ತಹಳ್ಳಿ ಎನ್.ಜಿ.ಎಫ್. ಬಡಾವಣೆಯಲ್ಲಿರುವ ನೀರಿನ ಟ್ಯಾಂಕ್ ಮತ್ತು ಆಂದ್ರ ಬ್ಯಾಂಕ್ ಹತ್ತಿರವಿರುವ ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ.
- ಅರುಣಾಚಲಮ್ ಬಡಾವಣೆಯ 6ನೇ ಅಡ್ಡರಸ್ತೆಯಲ್ಲಿರುವ ಗುಂಡಿಗಳನ್ನು ಮುಚ್ಚಲು ಕೋರಿರುತ್ತಾರೆ.
- ಅನ್ನಪೂರ್ಣೇಶ್ವರಿ ನಗರದ ಆರ್.ಎಚ್.ಸಿ.ಎಸ್. ಬಡಾವಣೆಯಲ್ಲಿನ ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆಯಲು ಕೋರಿರುತ್ತಾರೆ.
- ಮಲ್ಲತ್ತಹಳ್ಳಿ ಕೆರೆ ಮುಖ್ಯರಸ್ತೆಯಲ್ಲಿರುವ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆಗೆಯಲು ಕೋರಿರುತ್ತಾರೆ.

**ಕ್ರಮ: ಸ.ಕಾ.ನಿ.ಅ (ರಾರಾ ನಗರ), ಕಿರಿಯ ಅಭಿಯಂತರರು ಶ್ರೀ. ವೆಂಕಟೇಶ.ಸಿ ಮತ್ತು ಸಹಾಯಕ ಅಭಿಯಂತರರು ಶ್ರೀ. ಸಿದ್ದರಾಮಯ್ಯ**

ಘನ ತ್ಯಾಜ್ಯ ವಿಭಾಗಕ್ಕೆ ಸಂಬಂಧಿಸಿದಂತೆ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರ ಮೇಲೆ ನಿಗಾವಹಿಸಿ ಗುರುತಿಸಿ ಪಟ್ಟಿಮಾಡುವಂತೆ ಈ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ತತ್ಸಂಬಂಧ ಹಾಜರಿದ್ದ ಕಿ.ಆ.ಪ ಸದರಿ ಪ್ರಕ್ರಿಯೆ ಜಾರಿಯಲ್ಲಿದ್ದು ಮುಂದಿನ ಸಭೆಯಲ್ಲಿ ಸಲ್ಲಿಸುವುದಾಗಿ ಸಭೆಯಲ್ಲಿ ವ್ಯಕ್ತಪಡಿಸಿರುತ್ತಾರೆ, ಮುಂದುವರೆದಂತೆ ಪ್ರತಿ ಮೇಲ್ವಿಚಾರಕರು ಅವರ ವ್ಯಾಪ್ತಿಗೆ ಬರುವ ಒಂದು ಬ್ಲಾಕ್ ಅನ್ನು ಮಾದರಿ ಬ್ಲಾಕ್ ಆನ್ನಾಗಿ ಎಮ್.ಎಸ್.ಡಬ್ಲೂ.2016 ಅನ್ವಯ ಮಾರ್ಪಡಿಸಲು ಅಗತ್ಯ ಕ್ರಮವಹಿಸಲು ತಿಳಿಸಲಾಗಿರುತ್ತದೆ.

ಒಣ ತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದಂತೆ ಸಂಗ್ರಹಿಸಿರುತ್ತಿರುವ SHC/rag pickers ರವರು ಸದರಿ ವಾರ್ಡ್ ನಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರ ಕಟ್ಟಡವಿಲ್ಲದಿರುವುದರಿಂದ ಸಮರ್ಪಕವಾಗಿ ಒಣ ತ್ಯಾಜ್ಯವನ್ನು ನಿರ್ವಹಿಸಲು ಕಷ್ಟಕರವಾಗಿರುವುದಾಗಿ ಸಭೆಯಲ್ಲಿ ವ್ಯಕ್ತಪಡಿಸಿದ್ದು ಕಳೆದ 9 ತಿಂಗಳಿಂದಲು ಹಲವು ಕೋರಿಕೆಗಳನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮವಹಿಸಿಲ್ಲದಿರುವುದರ ಬಗ್ಗೆ ವ್ಯಕ್ತಪಡಿಸಿರುತ್ತಾರೆ, ಹಾಜರಿದ್ದ ನೋಡಲ್ ಅಧಿಕಾರಿಗಳು, ಜಂಟಿ ಆಯುಕ್ತರು ಘನ ತ್ಯಾಜ್ಯರವರೊಂದಿಗೆ ಚರ್ಚಿಸಲಾಗಿದ್ದು ಸದರಿ ವಾರ್ಡ್ ನಲ್ಲಿ DWCC ಇಲ್ಲದಿರುವುದರಿಂದ ಹಾಗೂ ಸದರಿ ಕಟ್ಟಡಕ್ಕೆ ಸ್ಥಳಾವಕಾಶವು ಲಭ್ಯವಿಲ್ಲದಿರುವುದಾಗಿ ಕಂಡುಬಂದಿರುವುದರಿಂದ ಸೂಕ್ತ ಖಾಸಗಿ ಸ್ಥಳವು ಲಭ್ಯವಿದ್ದಲ್ಲಿ ಬಾಡಿಗೆ ರೂಪದಲ್ಲಿ ಪಡೆಯಲು ಸಕ್ಷಮ ಪ್ರಾಧಿಕಾರಾದ ಅನುಮೋದನೆಯೊಂದಿಗೆ ಕ್ರಮವಹಿಸುವ ಬಗ್ಗೆ ಪರಿಶೀಲಿಸಿ ಮುಂದಿನ ಸಭೆಯಲ್ಲಿ ತಿಳಿಸಲು JHI ರವರಿಗೆ ಸೂಚಿಸಲಾಯಿತು.

ಕ್ರಮ: ಸ.ಕಾ.ನಿ.ಅ (ಘ.ತ್ಯಾ.ನಿ), ಹಾಗೂ ಶ್ರೀ. ರವಿಕುಮಾರ್ ಮತ್ತು ವಿಜಯ್ ಕಿರಿಯ ಆರೋಗ್ಯ ಪರಿವೀಕ್ಷಕರು

ವಾರ್ಡ್ 129ರಲ್ಲಿ ಎಲ್ಲೆಲ್ಲಿ ಹೊಸ ವಿದ್ಯುತ್ ದೀಪಗಳ ಅವಶ್ಯಕತೆ ಇರುತ್ತದೆಯೋ ಅವುಗಳನ್ನು ಗಮನಕ್ಕೆ ತೆಗೆದುಕೊಂಡು ತುರ್ತಾಗಿ ಕ್ರಮಕೈಗೊಳ್ಳಲು/ಅಳವಡಿಸಲು ಕೋರಿರುತ್ತಾರೆ

ಕ್ರಮ: ಸಹಾಯಕ ಅಭಿಯಂತರರು ಶ್ರೀ.ವಿ.ಭರತ್

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟವರಿಗೆ ದೂರವಾಣಿ ಮುಖಾಂತರ ತಿಳಿಸಲು ಅಥವಾ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ,
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ,
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ,
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.